ಸಭಾಧ್ಯಕ್ಷರು :– ಪ್ರಸ್ತಾವಿತ ವಿಷಯಗಳನ್ನು ಮುಂಗಡ ಪತ್ರದಲ್ಲಿ ಚರ್ಚೆ ಮಾಡುವಾಗ ಸಾಕಷ್ಟು ಅವಕಾಶಗಳಿರುವುದರಿಂದ ನಿಯಮ 60 ರಡಿಯಲ್ಲಿ ನೀಡಿದ ವಿಷಯಕ್ಕೆ ಚರ್ಚೆಗೆ ನಿರಾಕರಿಸಲಾಗಿದೆ.

ಶ್ರೀ ಹೆಚ್.ಡಿ. ರೇವಣ್ಣ :– ಮಾನ್ಯ ಸಭಾಧ್ಯಕ್ಷರೆ, ಮೊದಲು ಚರ್ಚೆ ಮಾಡಿ ನಂತರ ನೀವು COD ಗಾದರೂ ಕೊಡಿ CBI ಗಾದರೂ ಯಾವುದಕ್ಕಾದರೂ ಕೊಡಿ.

ಸಭಾಧ್ಯಕ್ಷರು :– ನಿರಾಕರಿಸಿದ್ದೇನೆ. ನೀವು ಬಜೆಟ್‌ನಲ್ಲಿ ಸಾಕಷ್ಟು ವಿಚಾರಗಳನ್ನು ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ :– ದಯಮಾಡಿ ಯಾವಾಗ COD ಗೆ ಕೊಡುತ್ತೀರೆಂದು ಹೇಳಿ.

ಸಭಾಧ್ಯಕ್ಷರು :– ನಾನು ನಿರಾಕರಿಸಿದ್ದೇನೆ. ಬೇರೆ ರೂಪದಲ್ಲಿ ತನ್ನಿ.

ಶ್ರೀ ಹೆಚ್.ಡಿ.ರೇವಣ್ಣ :– ಪೂರ್ತಿ ಏನೇನು enquiry ನಡೆದಿದೆಯೋ de-notification ಮೇಲೆ ಅದಲ್ಲವನ್ನು ಕೊಡುತ್ತಾರೋ ಅಥವಾ ಇದೊಂದನ್ನು ಕೊಡುತ್ತಾರೋ ಹೇಳಿ. ಅದನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಲಿ.

ಸಭಾಧ್ಯಕ್ಷರು :– ಈಗ entire ಆಗಿ COD ಗೆ ಹೇಳಿದ್ದಾರೆ. ಈಗ ವಿತ್ತೀಯ ಕಲಾಪ. ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಾರಂಭ ಮಾಡಿ.

4. ವಿತ್ತೀಯ ಕಾರ್ಯಕಲಾಪ

2012–13ನೇ ಸಾಲಿನ ಆಯವ್ಯಯ ಅಂದಾಜಿನ ಚರ್ಚೆ

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) :– ಮಾನ್ಯ ಸಭಾಧ್ಯಕ್ಷರೆ, ಈ ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ಸದಾನಂದ ಗೌಡರು ಈ ರಾಜ್ಯದ ಚೊಚ್ಚಲ ಮುಂಗಡ ಪತ್ರವನ್ನು 2012–13ನೇ ಸಾಲಿಗೆ ಮಂಡಿಸಿದ್ದಾರೆ. ಈ ಬಾರಿ ಬಜೆಟ್ ಮಂಡಿಸಬೇಕೆಂದು ರಾಜ್ಯದಲ್ಲಿ ದೊಡ್ಡ ಜಗಳವೇ ಆಯಿತು. ಶ್ರೀ ಯಡಿಯೂರಪ್ಪನವರು. ನಾನು ಮಂಡಿಸಬೇಕೆಂದು. ಶ್ರೀ ಸದಾನಂದಗೌಡರು ಮುಖ್ಯಮಂತ್ರಿಯಾಗಿ ನಾನೇ ಮಂಡಿಸುತ್ತೇನೆಂದು. ಈ ಬಜೆಟ್ ಮಂಡಿಸುವ ಸಂಘರ್ಷದಲ್ಲಿ ಶ್ರೀ ಯಡಿಯೂರಪ್ಪನವರು ಸೋತರು. ಶ್ರೀ ಸದನಾಂದಗೌಡರು ಗೆದ್ದಿದ್ದಾರೆ. ನಾನು ಶ್ರೀ ಸದಾನಂದಗೌಡರು ಈ ರಾಜ್ಯದ ಮುಖ್ಯಮಂತ್ರಿ ಹಾಗೂ ಹಣಕಾಸಿನ ಮಂತ್ರಿ ಬಜೆಟ್‌ನಲ್ಲಿ ಒಂದು ಹೊಸ ದೃಷ್ಟಿಕೋನ ಹಾಗೂ ದೂರದೃಷ್ಟಿ. ಈ ರಾಜ್ಯದ ಸಮಸ್ಯೆಗಳಿಗೆ ಪರಿಹಾರ ಕೊಡತಕ್ಕಂತಹ ಕಾರ್ಯಕ್ರಮಗಳು, ಜನತೆಯ ಜೀವನವನ್ನು ಮೇಲ್ಮಟ್ಟಕ್ಕೆ ತೆಗೆದುಕೊಂಡು

ಹೋಗುವುದಕ್ಕೆ ಬೇಕಾದಂತಹ ಆರ್ಥಿಕ ಭೂಮಿಕೆ. ಈ ದಿಕ್ಕಿನಲ್ಲಿ ಹೋಗುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಏಕೆಂದರೆ ಬಹಳ ಸಂಘರ್ಷ ಮಾಡಿ ಬಜೆಟ್ ಮಂಡಿಸಿದ್ದಾರೆ. ಆದರೆ ಅದು ಹುಸಿಯಾಗಿದೆ. ಜಗಳ ಏಕೆ ನಡೆಯುತ್ತಿದೆಯೆಂದು ನಾನು ಹೇಳುವುದಲ್ಲ. ಇದು ಜಗಜ್ಜಾಹಿರಾಗಿರುವ ವಿಚಾರ ಮುಂದಿನ 2012–13 ರ ಆರ್ಥಿಕ ವರ್ಷದಲ್ಲಿ next fiscial year ನಲ್ಲಿ ಒಂದು ಲಕ್ಷ ಕೋಟಿ ರೂ.ಗಳ ಬಜೆಟ್ ಮಂಡಿಸಬೇಕೆಂಬುದು ಶ್ರೀ ಯಡಿಯೂರಪ್ಪನವರ ಕನಸಾಗಿತ್ತು. ಮುಂದಿನ ವರ್ಷಕ್ಕೆ ನಾನು ಒಂದು ಲಕ್ಷ ಕೋಟಿ ಬಜೆಟ್ ಮಂಡಿಸುತ್ತೇನೆಂದು ಕಳೆದು ಒಂದು ವರ್ಷದಿಂದ ಹೇಳಿಕೊಂಡು ಬಂದಿದ್ದರು. ಶ್ರೀ ಯಡಿಯೂರಪ್ಪನವರು ಒಂದು ಲಕ್ಷ ಕೋಟಿ ಬಜೆಟ್ ಮಂಡಿಸುತ್ತೇನೆಂದು ಹೇಳಿದ್ದಾರಲ್ಲ, ಹೇಗಾದರೂ ಮಾಡಿ ಒಂದು ಲಕ್ಷ ಕೋಟಿ ಬಜೆಟ್ ಮಂಡಿಸಬೇಕೆಂದು ಹೇಳಿ ಶ್ರೀ ಸದಾನಂದಗೌಡರು ಮಂಡಿಸಿದರು. ಇದು ರಾಜ್ಯದ ಇತಿಹಾಸದಲ್ಲಿ ಒಂದು ಮೈಲಿಗಲ್ಲಾಗಿದೆ. ಇಲ್ಲವೆಂದು ಹೇಳುವುದಿಲ್ಲ. ಇಡೀ ದೇಶದಲ್ಲೇ ಒಂದು ಲಕ್ಷ ಕೋಟಿಗಿಂತ ಹೆಚ್ಚು ಬಜೆಟ್ ಮಂಡಿಸಿರುವ ರಾಜ್ಯಗಳಲ್ಲಿ ಕರ್ನಾಟಕ 5ನೇ ರಾಜ್ಯ. Karnataka stands 5th in the Country. ಈಗಾಗಲೇ ಉತ್ತರ ಪ್ರದೇಶ, ಮಹಾರಾಷ್ಟ್ರ, ತಮಿಳುನಾಡು, ಆಂಧ್ರಪ್ರದೇಶಗಳಲ್ಲಿ ಈ ರೀತಿ ಬಜೆಟ್ ಈಗಾಗಲೇ ಮಂಡಿಸಿದ್ದಾರೆ. ತಮ್ಮ ಹತ್ತಿರ ಸಂಪನ್ಮೂಲಗಳು ಇಲ್ಲದೇ ಹೋದರೂ ಕೂಡ ಈ ವರ್ಷ ಕರ್ನಾಟಕ ಒಂದು ಲಕ್ಷ ಕೋಟಿ ರೂ.ಗಳ ಆಯವ್ಯಯವನ್ನು ಮಂಡಿಸಿದೆ. ಇದರಲ್ಲಿ ದೇಶದಲ್ಲೇ ಕರ್ನಾಟಕ 5ನೇ ರಾಜ್ಯವಾಗಿದೆ. ಮಾನ್ಯ ಅಧ್ಯಕ್ಷರೆ, ನಾವು ಎಷ್ಟು ಕೋಟಿ ರೂ.ಗಳ ಬಜೆಟ್ ಮಂಡಿಸುತ್ತೇವೆ ಎನ್ನುವುದು ಮುಖ್ಯವಲ್ಲ ಜನರ ಸಂಕಷ್ಟಗಳಿಗೆ ಹೇಗೆ ಸ್ಪಂದಿಸುತ್ತೇವೆ ಎನ್ನುವುದು ಮುಖ್ಯ ಎಂದು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಡಿ.ವಿ. ಸದಾನಂದಗೌಡರು ಒಂದು ಸಾರಿ ಹೇಳಿದ್ದಾರೆ. ಆ ಕಾರಣದಿಂದ ನಾನು ಹೊಸ ದೃಷ್ಟಿಕೋನವಿರಬಹುದು. ಹೊಸ ಆಲೋಚನೆಗಳಿರಬಹುದು. ರಾಜ್ಯದ ಬಗ್ಗೆ ಹೊಸ thinking ಇರಬಹುದು. ಎಂದೆಲ್ಲಾ ಅಂದು ಕೊಂಡಿದ್ದೆ. ಆದರೆ ಈ ಬಜೆಟ್‌ನ್ನು ನೋಡಿದ ಮೇಲೆ ಅದ್ಯಾವುದೂ ಇಲ್ಲ. ಇವತ್ತು ಇವರು ಏನು ಬಜೆಟ್ ಮಂಡಿಸಿದ್ದಾರೆ, ಆ ಬಜೆಟ್‌ಗೆ ಗೊತ್ತು ಗುರಿ, ದೂರ ದೃಷ್ಟಿಯಾಗಲಿ ಏನೇನೂ ಇಲ್ಲ. ಜೊತೆಗೆ it is not a growth oriented Budget. ಇದು growth oriented Budget ಅಲ್ಲ ಎನ್ನುವುದು ಅಂಕಿ–ಅಂಶಗಳ ಮೂಲಕ ಆಮೇಲೆ ಸದನಕ್ಕೆ ತಿಳಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮಾನ್ಯ ಅಧ್ಯಕ್ಷರೆ 2011–12ರಲ್ಲಿ

ಶ್ರೀ ಯಡಿಯೂರಪ್ಪನವರು ಮಂಡಿಸಿದ ಬಜೆಟ್‌ಗೆ ಅಲ್ಲಿ ಇಲ್ಲಿ ಟಿಂಕ್‌ರಿಂಗ್ ಮಾಡಿ ಈ ಸಾರಿ ಬಜೆಟ್ ಮಂಡಿಸಿದ್ದಾರೆ. ಅವರು ಕಳೆದ ಸಾರಿ ಕೃಷಿ ಬಜೆಟ್‌ನ್ನು ಮಂಡಿಸಿದ್ದರು. ಇಡೀ ದೇಶದಲ್ಲೇ ಕೃಷಿ ಬಜೆಟ್ ಮಂಡಿಸಿದ್ದೇನೆ. ಯಾರು ಕೂಡ ಕೃಷಿ ಬಜೆಟ್‌ನ್ನು ಮಂಡಿಸಿಲ್ಲ ಎಂದು ಇಡೀ ರಾಜ್ಯದ ದೇಶದ ಜನತೆಗೆ ತಿಳಿಸಿದ್ದಾರೆ. ಇವರು ಈ ವರ್ಷ ನಾನೂ ಕೂಡ ಕೃಷಿ ಬಜೆಟ್ ಮಂಡಿಸುತ್ತೇನೆಂದು ಮಂಡಿಸಿದ್ದಾರೆ. ಕೃಷಿ ಬಜೆಟ್‌ನಲ್ಲಿ ಉದ್ದಕ್ಕೂ ನೋಡಿಕೊಂಡು ಬಂದರೆ ಸ್ವಲ್ಪ ಧಾರಾಳವಾಗಿ ನಮ್ಮ ಕನ್ನಡದ ಕವಿಗಳು, ಸಾಹಿತಿಗಳು, ಬರೆದಿರುವ ಕವಿತೆಗಳನ್ನು ಬರೆದಿದ್ದಾರೆ. ಅಡಿಗ ಅವರದು, ಧಾರವಾಡದ ಚೆನ್ನವೀರ ಕಣವಿಯವರದು ಡಿ.ವಿ. ಗುಂಡಪ್ಪನವರದು, ದ.ರಾ. ಬೇಂದ್ರೆಯವರದು, ಬಸವಣ್ಣನವರದು ಹಾಗೂ ಸರ್ವಜ್ಞರ ಕವಿತೆಗಳನ್ನೆಲ್ಲಾ ತೆಗೆದು ತೆಗೆದು ಬಜೆಟ್ ಪುಸ್ತಕದಲ್ಲಿ ಹಾಕಿದ್ದಾರೆ. ಇದು ಒಂದು ಬಿಟ್ಟರೆ ನನಗೆ ಹೊಸದಾಗಿ ಏನು ಕಾಣಿಸುತ್ತಿಲ್ಲ. ಇಷ್ಟೇ ಕಾಣುತ್ತಿರುವುದು ನನಗೆ. ಬಹುಶಃ ಆ ಕಡೆ ಈ ಕಡೆ ಎಲ್ಲರಿಗೂ ಅನುಭವಕ್ಕೆ ಬಂದಿದೆ. ಕವಿತೆಗಳನ್ನು ಮಾನ್ಯ ಯಡಿಯೂರಪ್ಪನವರು ಪ್ರಾರಂಭ ಮಾಡಿದರು ಅದನ್ನು ನೀವು follow ಮಾಡಿದಿರಿ ಬಹಳ ಸಂತೋಷ. ಯುವಕರಿಗೆ ಒಂದು chapter ಇದೆ. ಅದನ್ನು ನಾನು ನೋಡಿದ್ದೇನೆ. ನಾವು ಯುವಕರಿಗೆ ಶಕ್ತಿ ಕೊಡುತ್ತೇವೆ, ಯುವಕರ ಶಕ್ತಿಯನ್ನು ಬಳಸಿಕೊಳ್ಳುತ್ತೇವೆ. ಯುವಕರೆ ದೇಶದ ಭವಿಷ್ಯ. ಇವರೇ ದೇಶ ಕಟ್ಟುವರರು ಎಂದು ಹೇಳಿ. 'ಕಟ್ಟುವೆವು ನಾನು ನಾಡೊಂದನು' ಇದು ಅಡಿಗ ಅವರ ಕವಿತೆ. ಇದೊಂದು ಕವಿತೆಯನ್ನು ಓದಿಕೊಳ್ಳಬೇಕಷ್ಟೆ. 'ಕಟ್ಟುವೆವು ನಾವು ನಾಡೊಂದನ್ನು, ಹೊಸ ನಾಡೊಂದನ್ನು' ಅದನ್ನು ಬಿಟ್ಟರೆ ಬೇರೇನೂ ಇಲ್ಲ. 'ಸುರಿಸುವೆವು ನೆತ್ತರನ್ನು' ಎಲ್ಲಿ ಸುರಿಸೋದು? ಏನು ಮಾಡೋದು ? ಇಷ್ಟೆ ಕಾಣುವುದು. ಯುವಕರಿಗಾಗಿರುವ ಇಡೀ chapter ನ್ನು ಓದಿದರೆ ಇದು ಒಂದೇ ಪದ್ಯ ಕಾಣುವುದು. 'ಕಟ್ಟುವೆವು ನಾವು ನಾಡೊಂದನ್ನು, ಹೊಸ ಬೀಡೊಂದನ್ನು ಸುರಿಸುವೆವು ನೆತ್ತರನ್ನು' ನಾವು ಸೋಷಿಯಲಿಷ್ಟ ಪಾರ್ಟಿಯಲ್ಲಿದ್ದಾಗ ಈ ಹಾಡನ್ನು ಹೇಳುತ್ತಿದ್ದೆವು. ನಾವು ಚಿಕ್ಕವರಿದ್ದಾಗ ಸೋಷಿಯಾಲಿಷ್ಟ್ ಭಾಷಣದಲ್ಲಿ ಈ ಹಾಡನ್ನು ಉಪಯೋಗಿಸುತ್ತಿದ್ದೆವು. ಈಗ ಇವರು ಯುವಕರನ್ನು ಜ್ಞಾಪಕ ಮಾಡಿಕೊಂಡು ಶ್ರೀ ಗೋಪಾಲಕೃಷ್ಣ ಅಡಿಗ ಅವರ ಕವಿತೆಯನ್ನು ಬರೆದಿದ್ದಾರೆ. ಅಡಿಗ ಅವರು ಒಳ್ಳೆಯ ಕವಿಗಳು. ಅದರ ಬಗ್ಗೆ ನನ್ನದೇನೂ ತಕರಾರಿಲ್ಲ. ಗುಂಡಪ್ಪನವರು ಒಳ್ಳೆಯ ಸಾಹಿತಿಗಳು, ದ.ರಾ. ಬೇಂದ್ರೆಯವರು ಒಬ್ಬ ಮಹಾನ್ ಕವಿ. ಪುಟ್ಟಪ್ಪನವರು ಒಬ್ಬ ದೊಡ್ಡ ಮೇರು ಸಾಹಿತಿ. ಚೆನ್ನವೀರ ಕಣವಿಯವರು ಒಳ್ಳೆಯ ಸಾಹಿತಿ, ಇವರ ಬಗ್ಗೆ ನನ್ನದೇನೂ

ತಕರಾರಿಲ್ಲ. ಬಸವಣ್ಣನವರು ಒಬ್ಬ ಸಮಾಜ ಸುಧಾರಕ, ನಮ್ಮ ಕರ್ನಾಟಕದವರೇ ಆದ ಶ್ರೀ ಸರ್ವಜ್ಞ ಅವರ ಒಂದು ಪೀಠವನ್ನು ಮಾಡಿ ಎಂದರೆ ಇವತ್ತಿನವರೆವಿಗೂ ಮಾಡಿಲ್ಲ. ಸಮಾಜಕ್ಕೆ ಬಹಳ ಸಾಮಾಜಿಕ ಮೌಲ್ಯಗಳನ್ನು ಹೇಳಿ ಹೋಗಿರುವ ನಮ್ಮ ಕರ್ನಾಟಕದವರಾದ ಶ್ರೀ ಸರ್ವಜ್ಞ ಅವರ ಹೆಸರಿನಲ್ಲಿ ಒಂದು ಪ್ರಾಧಿಕಾರ ಮಾಡಿ, ಅದು ಜನರ ಮನಸ್ಸಿನಲ್ಲಿ ಜ್ಞಾಪಕವಾಗಿ ಉಳಿದುಕೊಳ್ಳಲಿ ಎಂದು ಶ್ರೀ ಬಿ.ಸಿ. ಪಾಟೀಲ್ ಅವರು ಮಾನ್ಯ ಯಡಿಯೂರಪ್ಪ ಅವರಿದ್ದಾಗಲೂ ಹೇಳಿದರು. ಇವರಿಗೂ ಹೇಳಿದರು. ಈ ಬಗ್ಗೆಯೂ ಕೂಡ ಇವರು ಯಾವುದೇ ಚಕಾರ ಎತ್ತಿರುವುದಿಲ್ಲ. ಬರೀ ಅವರ ಮೂರು ಸಾಲಿನ ಪದ್ಯಗಳಲ್ಲಿರುವ ತ್ರಿಪದಿಗಳನ್ನು ಮಾತ್ರ ಬಳಸಿಕೊಂಡಿದ್ದಾರೆ. ಇದರಿಂದ ಅವರನ್ನು ಗೌರವಿಸತಕ್ಕ ಕೆಲಸವಾಗಿಲ್ಲ ಎನ್ನುವುದು ಬಹಳ ಸ್ಪಷ್ಟವಾಗಿ ಕಾಣುತ್ತದೆ. ಆದ್ದರಿಂದ ಇದು ಒಂದು ಲಕ್ಷ ಕೋಟಿ ರೂ.ಗಳ ಬಜೆಟ್ ಹೇಗೆ ಆಗುತ್ತದೆ ಮಾನ್ಯ ಅಧ್ಯಕ್ಷರೆ ? 2012–13 ನೇ ಸಾಲಿನ ಬಜೆಟ್‌ನಲ್ಲಿ ರೆವಿನ್ಯೂ ಬಜೆಟ್ ಎಸ್ಟಿಮೇಟ್ಸ್ 81 ಸಾವಿರ ಕೋಟಿ 461 ರೂ.ಗಳು. ಇದು Revenue Receipts Rs. 103.369 crores ಇದು total budget estimates. Revenue receipts and capital receipts both put together ರೂ. 103.369 ಕೋಟಿ ರೂ.ಗಳು ಆಗುತ್ತದೆ. ಅದರಲ್ಲಿ ಖರ್ಚು 1,02,742 ಕೋಟಿ ರೂ.ಗಳು. ಇವು ಅಂದಾಜುಗಳು. Out ot these capital receipts ಎಷ್ಟಿದೆ ಎಂದರೆ, 21,908 ಕೋಟಿ ರೂ.ಗಳು ಸುಮಾರು 22 ಸಾವಿರ ಕೋಟಿ ರೂ.ಗಳು ಮಾನ್ಯ ಅಧ್ಯಕ್ಷರೆ, ಇದು ಸಾಲದ ಕಾಂಪೋನೆಂಟ್. 81,461 ಕೋಟಿ ರೂ.ಗಳ Total Receipts ಗೆ 21,908 ಕೋಟಿ ಸೇರಿಸಿಕೊಂಡು, Revenue recepts + capital receipts ಸೇರಿಸಿಕೊಂಡು 1,03,369 ಕೋಟಿ ರೂ.ಗಳನ್ನು ನಾವು ಜಮಾ ಮಾಡುತ್ತೇವೆ, ವಸೂಲಿ ಮಾಡಿ, ಸಂಪನ್ಮೂಲ ಕ್ರೋಡೀಕರಣ ಮಾಡುತ್ತೇವೆಂದು ಹೇಳಿದ್ದಾರೆ. 22 ಸಾವಿರ ಕೋಟಿ ರೂ.ಗಳ ಸಾಲ ತೆಗೆದುಕೊಂಡು ಒಂದು ಲಕ್ಷ ಕೋಟಿ ಬಜೆಟ್ ಮಂಡಿಸಬೇಕೆನ್ನುವ ಹುಚ್ಚು ಭ್ರಮೆ ಸರಿಯಿಲ್ಲ. ಜನಗಳಿಗೆ ಏನೋ 1 ಲಕ್ಷ ಕೋಟಿ ರೂಪಾಯಿಗಳ ಬಜೆಟ್ ಮಂಡಿಸಿದ್ದೇವೆಂದು ಹೆಗ್ಗಳಿಕೆ ಪಡೆದಕೊಳ್ಳುವುದಕ್ಕೆ 22 ಸಾವಿರ ಕೋಟಿ ಸಾಲ ತೆಗೆದುಕೊಳ್ಳಬೇಕಾ ? ಮಾನ್ಯ ಅಧ್ಯಕ್ಷರೆ 22 ಸಾವಿರ ಕೋಟಿ ಸಾಲ ತೆಗೆದುಕೊಳ್ಳುವುದರಿಂದ ನಮಗೆ debt burden ಎಷ್ಟು ಆಗುತ್ತದೆ ? Not only the total liability is increasing, but debt service is also increasing accordingly. Debt service is increased ಎಂದರೆ that is

a wasteful expenditure, non-developmental expenditure. ಈಗಾಗಲೇ 2011–12ಕ್ಕೆ 9 ಸಾವಿರದ 100 ಕೋಟಿ ರೂಪಾಯಿಗಳು. debt service ಇದೆ. Please go through the Mid Term Fiscal Plan ನೀವೇ Mid Term Fiscal Plan ಮಾಡಿರುವುದು. 2012–16 Mid Term Fiscal Plan ಇದರಲ್ಲಿ. ನೀವೇ ಹೇಳಿದ್ದೀರಿ. ಈ ವರ್ಷಕ್ಕೆ ಮಾರ್ಚ್ ಮುಗಿಯುವ ಒಳಗಡೆ the debt service from Government of Karnataka is 9 ಸಾವಿರ 100 ಕೋಟಿಗಳು. ಮುಂದಿನ ವರ್ಷಕ್ಕೆ 22 ಸಾವಿರ ಕೋಟಿ ಸಾಲ ಅದಲ್ಲಿ ಎಷ್ಟು ಆಗುತ್ತದೆ ಸ್ವಾಮಿ ? ಮರೆತು ಹೋಗುವುದಕ್ಕಿಂತ ಮುಂಚಿತವಾಗಿ ಈಗಲೇ ತಮ್ಮ ಗಮನಕ್ಕೆ ತರುತ್ತೇನೆ. Mid Term Fiscal Plan ನ page no. 69 ರಲ್ಲಿ projection ಕೊಟ್ಟಿದ್ದಾರೆ. Fiscal Responsibility Act ಪ್ರಕಾರ ಇದನ್ನು ಕೊಡಲೆಬೇಕು. ಅಂದಾಜು ಮಾಡಿ ಹೇಳುತ್ತಾರೆ. It is mandatory on the part of the Government as per Fiscal Responsibility Act, 2002. ಮಾನ್ಯ ಅಧ್ಯಕ್ಷರೆ, ಸಾಲ ಸೇವೆಗಳು, debt service. ಈ ವರ್ಷಕ್ಕೆ 2011–12ಕ್ಕೆ 9 ಸಾವಿರದ 102 ಕೋಟಿ estimated debt service. ರಾಜ್ಯದ ಮೇಲೆ ಹೊರೆ. ಅಂದರೆ, ನಮಗೆ 1 ಲಕ್ಷ ಕೋಟಿಯಲ್ಲಿ ಸುಮಾರು 9 ಸಾವಿರ ನೂರು ಕೋಟಿ ರೂಪಾಯಿ ಎಲ್ಲಿಗೆ ಹೋಗುತ್ತದೆ ? ಅಸಲು ಮತ್ತು ಬಡ್ಡಿಗೆ ಹೋಗುತ್ತದೆ. 2012–13ಕ್ಕೆ ಬಜೆಟ್ ಮಂಡಿಸಿದ್ದಾರಲ್ಲಾ ಈ ಬಜೆಟ್ ಮುಂದಿನ ಮಾರ್ಚ್ ಕೊನೆಗೆ ಎಷ್ಟು debt service ಆಗಬಹುದು. ಎಂದು ಲೆಕ್ಕ ಹಾಕಿದ್ದಾರೆ ಎಂದರೆ, 11,170 ಕೋಟಿ ಆಗಬಹುದು ಎಂದು ಲೆಕ್ಕ ಹಾಕಿದ್ದಾರೆ. ಇದರಲ್ಲಿ interest payment ಎಷ್ಟು ಆಗುತ್ತದೆ. ಎಂದರೆ, ಈ ಸಾಲ ಈ ವರ್ಷ ಎಷ್ಟಾಗಿದೆ ಮುಂದಿನ ವರ್ಷಕ್ಕೆ ಎಷ್ಟು ಆಗುತ್ತೆ ಎಂದರೆ, ಈ ವರ್ಷದ ಕೊನೆಗೆ ಸಂಚಿತ ಸಾಲ ಸಂಗ್ರಹಣೆ ಈ ಆಯವ್ಯಯೇತರ ಸಾಲವನ್ನು ಸೇರಿಸಿಕೊಂಡು 1 ಲಕ್ಷದ 1 ಸಾವಿವರದ 196 ಕೋಟಿ ಸಾಲ. ಈ ಆಯವ್ಯಯೇತರ ಸಾಲಗಳು 3 ಸಾವಿರದ 249 ಕೋಟಿ ಈ ವರ್ಷಕ್ಕೆ Both put together 1 ಲಕ್ಷದ 4 ಸಾವಿರದ 445 ಕೋಟಿ ರೂಪಾಯಿಗಳು ಸಾಲ. Next Fiscal year ಗೆ 1 ಲಕ್ಷದ 14 ಸಾವಿರದ 745 ಕೋಟಿ ಒಟ್ಟು ಬಜೆಟ್ ಸಾಲಗಳು. ಒಟ್ಟು ಬಜೆಟ್ ಆಯವ್ಯಯೇತ್ತರ ಸಾಲಗಳು 3 ಸಾವಿರದ 249 both put together 1 ಲಕ್ಷದ 17 ಸಾವಿವರದ 994 ಕೋಟಿ ರೂಪಾಯಿ. Nearly Rs. 1,18,000 crores ನಮ್ಮ ಸಾಲ. ನಮ್ಮ ಬಜೆಟ್ ಎಷ್ಟು ಅಂಥ ಹೇಳಿದರೆ, ಅವರ ಪ್ರಕಾರ ಖರ್ಚು ಮಾಡುವುದು ನಾವು 1 ಲಕ್ಷದ 2 ಸಾವಿರದ

700 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡುತ್ತೇವೆ. ಬಜೆಟ್‌ನ ನಮ್ಮ ಮೇಲಿನ ಸಾಲ ಮುಂದಿನ ವರ್ಷಕ್ಕೆ 1 ಲಕ್ಷದ 18 ಸಾವಿರ ಕೋಟಿ ರೂಪಾಯಿಗಳ ಸಾಲ ಆಗುತ್ತದೆ. Debt service 11 ಸಾವಿರದ 170 ಕೋಟಿ ರೂಪಾಯಿ ಆಗುತ್ತದೆ. I hop that I could able to convince you. ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರು. ಸಾಲ ಎಷ್ಟು ಕೋಟಿ ಮಂಡಿಸುತ್ತೇವೆ. ಅನ್ನುವುದು ಮುಖ್ಯ ಅಲ್ಲ. ನಮ್ಮ ಬಜೆಟ್ ಎಷ್ಟು ಜನಪರ ಇರುತ್ತದೆ. ಬಡವರ ಪರವಾಗಿ ಇರುತ್ತದೆ. ರೈತರ ಪರವಾಗಿ, ಬೆಳೆಯುವವರ ಪರವಾಗಿ ಇರುತ್ತದೆ ಅದು ಮುಖ್ಯ ಅನ್ನತಕ್ಕಂಥದ್ದನ್ನು ಹೇಳಿದ್ದರು. But ಅಲ್ಲಿ ಏಕೋ ಮಾನ್ಯ ಯಡಿಯೂರಪ್ಪನವರ ಪ್ರಭಾವ ಬಿದ್ದಿದೆ. ಬೇರೆ ವಿಚಾರದಲ್ಲಿ ಅವರ ಪ್ರಭಾರ ಬಿದ್ದ ಹಾಗೆ ಕಾಣುವುದಿಲ್ಲ. ನಿಮ್ಮ ಪ್ರಭಾವ ಇಲ್ಲವೋ ? ಮಾನ್ಯ ಯಡಿಯೂರಪ್ಪನವರು ನೀವು ಒಳ್ಳೆಯ ಬಜೆಟ್ ಮಂಡಿಸಿದ್ದಾರೆ ಎಂದು ಹೇಳಿದ್ದಾರೆ. ವ್ಯಂಗವಾಗಿ ಹೇಳಿರಬೇಕು ಅಂಥ ಕಾಣಿಸುತ್ತದೆ. ಮಾನ್ಯ ಯಡಿಯೂರಪ್ಪನವರೇ ಏಕೆ ತಾವು ಮೌನಕ್ಕೆ ಶರಣಾಗಿದ್ದೀರಿ ? ನೀವು ಒಳ್ಳೆ ಸ್ನೇಹಿತರು. ನಾವು ನೀವು ಒಟ್ಟಿಗೆ Assembly ಗೆ ಬಂದಿದ್ದೇವೆ. 1983 ರಿಂದ ಒಟ್ಟಿಗೆ ಬಂದಿದ್ದೇವೆ. ಸ್ವಲ್ಪ ದಿನಗಳು ಜನತಾ ಪಕ್ಷದಲ್ಲಿ ನಾವೂ ಒಟ್ಟಿಗೆ ಇದ್ದೇವು. ಅವರು ನಮಗಿಂತ Senior ಸ್ನೇಹಿತರು ಅಷ್ಟೇ. ನಾನು ಹೊಟ್ಟೆ ಕಿಚ್ಚು ಪಡುತ್ತಿಲ್ಲ. ನಾನು ಸಂತೋಷ ಪಡುತ್ತಿದ್ದೇನೆ. ಅವರಿಗೆ ಕುರ್ಚಿ ಸಿಗದಿದ್ದರೂ ಕೂಡ 1 ಲಕ್ಷ ಕೋಟಿ ರೂಪಾಯಿ ಬಜೆಟ್ ಮಂಡಿಸದೇ ಹೋದರೂ ಕೂಡ ಹೀಗೆ ಹೇಳಿದ್ದಾರಲ್ಲ ಎಂದು ನನಗೆ ಅಷ್ಟೇ ಸಂತೋಷ. ಏನು ಮಾನ್ಯ ಯಡಿಯೂರಪ್ಪನವರೆ, ಅಲ್ಲವಾ ? ನೋಡಿ ಒಪ್ಪಿಕೊಂಡಿದ್ದಾರೆ. ಇರಲಿ ಬಿಡಿ ನಾನು ಈಗ ರಾಜಕಾರಣ ಮಾತನಾಡುವುದಕ್ಕೆ ಹೋಗುವುದಿಲ್ಲ. ಸುಮ್ಮನೆ ಯಡಿಯೂರಪ್ಪನವರು ಬಹಳ ಮೌನವಾಗಿದ್ದಾರಲ್ಲಾ ನಗಲಿ ಎಂದು ಮಾತನಾಡಿದೆ.

ಡಾ॥ ಹೆಚ್.ಸಿ. ಮಹದೇವಪ್ರಸಾದ್ :– ಈಗ ನಗ್ತಾ ಇದ್ದಾರೆ.

ಶ್ರೀ ಸಿದ್ದರಾಮಯ್ಯ :– ಈಗ ನಗ್ತಾ ಇದ್ದೀರಿ. ಬಹಳ ಸಂತೋಷ, ಏನಾದರೂ ಮಾಡಿ ಸ್ವಾಮಿ ಸುಮ್ಮನೆ ಹೀಗೆ ಕುಳಿತುಕೊಂಡು ಬಿಟ್ಟರೆ ಕರ್ನಾಟಕದ ಜನ ನೋಡ್ತಾ ಇದ್ದಾರೆ.

ಶ್ರೀ ಬಿ. ಸುರೇಶ್ ಗೌಡ :– ಬೇರೆ ಯಾರೂ ರಾಜಕಾರಣ ಮಾತನಾಡುವುದಿಲ್ಲ.

ಶ್ರೀ ಸಿದ್ದರಾಮಯ್ಯ :– ನೀವು ಯಡಿಯೂರಪ್ಪನವರ ಪರ ಮಾತನಾಡುತ್ತಿದ್ದೀರೋ ಅಥವಾ ಯಾರ ಪರ ಮಾತನಾಡುತ್ತಿದ್ದೀರ? ಸದಾನಂದಗೌಡರ ಪರನೋ ಅಥವಾ ಇವರ ಪರನೋ?

ಶ್ರೀ ಬಿ. ಸುರೇಶ್ ಗೌಡ :– ನಾನು ಯಾರ ಪರನೂ ಇಲ್ಲ.

ಶ್ರೀ ಸಿದ್ದರಾಮಯ್ಯ :– ನೀವು ಯಾರ ಪರನೂ ಇಲ್ಲವಾ ? ಈಗ ಮಾತನಾಡುತ್ತಿದ್ದೀರಲ್ಲ ? ನೀವು ರೂ. 1 ಲಕ್ಷದ ಕೋಟಿ ಆಯವ್ಯಯ ಮಂಡಿಸಿದ್ದೇನೆ. ರೂ. 1 ಲಕ್ಷ ಕೋಟಿ ಮಂಡಿಸಿದ್ದೇನೆ ಎಂದು ಹೇಳುತ್ತಿದ್ದೀರಲ್ಲಾ? ಆದರಿಂದ ಈ ರಾಜ್ಯದ ಅಭಿವೃದ್ಧಿಗೆ ಈ ರಾಜ್ಯದ ಬೆಳವಣಿಗೆಗೆ ಬಡವರಿಗೆ, ರೈತರಿಗೆ ಏನೂ ಉಪಯೋಗ ಆಗುವುದಿಲ್ಲ ಅಥವಾ ಇದು ಈ ರಾಜ್ಯದ ಬೆಳವಣಿಗೆಯನ್ನು ತೀವ್ರಗೊಳಿಸುವುದಿಲ್ಲ. ರಾಜ್ಯದ ಅಭಿವೃದ್ಧಿಯನ್ನು ತೀವ್ರಗೊಳಿಸುವಂತೆ ಆಗುವುದಕ್ಕೆ ಸಾಧ್ಯವೇ ಇಲ್ಲ. ಈ ಬಜೆಟ್ ಬಗ್ಗೆ ಇವರಿಗೆ ಒಂದು ಭ್ರಮೆ ಇತ್ತಲ್ಲ ನಾನು ರೂ. 1 ಲಕ್ಷ ಕೋಟಿ ಮಂಡಿಸಬೇಕು ಎನ್ನುವುದು, ಇದು ಒಂದು ರೀತಿ ಹಾಸ್ಯಾಸ್ಪದ ಎಂದು ನನಗೆ ಅನ್ನಿಸುತ್ತದೆ. Of course ಅದು ಒಂದು ಮೈಲಿಗಲ್ಲು ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಕರ್ನಾಟಕ ರಾಜ್ಯದಲ್ಲಿ ರೂ. 1 ಲಕ್ಷ ಕೋಟಿ ಅದು ಈ ವರ್ಷ ಇಲ್ಲವೇ ಹೋದರೂ ಮುಂದಿನ ವರ್ಷ ಮಂಡಿಸಬಹುದಾಗಿತ್ತು. ಅವರಿಗೇನೆಂದರೆ, ನಂಬಿಕೆ ಇಲ್ಲ ನಾನು ಮುಂದಿನ ವರ್ಷ ಇರುತ್ತೇನೋ ಇಲ್ಲವೋ ಎಂದು. ಮುಂದಿನ ವರ್ಷಕ್ಕೆ ಆಗಲ್ಲ ರೂ. 1 ಲಕ್ಷ ಕೋಟಿ ಮುಂದಿನ ವರ್ಷಕ್ಕೆ ಆ resources ಎಲ್ಲಾ ಹೆಚ್ಚಾಗಿ ಸ್ವಲ್ಪ escalations ಎಲ್ಲಾ ಹೆಚ್ಚಾಗಿ ಹಣದುಬ್ಬರ ಎಲ್ಲಾ ಪ್ರತಿ ವರ್ಷ 7%, 6% ಪ್ರತಿ ವರ್ಷ every year ಇರುತ್ತದೆ. Next year ಹೆಚ್ಚಾಗುತ್ತದೆಂದು ಮಾಡಿದ್ದಾರೆ. ನಿಮಗೆ Plan size 10% ಹೆಚ್ಚಾಗಿದೆ. ಕಳೆದ ವರ್ಷ ಅಂದರೆ ಈ ಆರ್ಥಿಕ ವರ್ಷದಲ್ಲಿ 2011–12ನೇ ಸಾಲಿಗೆ ರೂ. 38 ಸಾವಿರ 70 ಕೋಟಿ ಇತ್ತು Plan size. ಅದರ ಮುಂದಿನ ವರ್ಷಕ್ಕೆ Plan size ನ್ನು ರೂ.42 ಸಾವಿರದ 30 ಕೋಟಿಗೆ ಏರಿಸಿದ್ದಾರೆ. ಅದರ ಪ್ರಕಾರ 10% growth ಆಗಿದೆ. ಅದರೆ ಬಜೆಟ್20% growth ಆಗಿದೆ. Budget Estimates 20% growth, whereas Plan growth is only 10%. This clearly indicates that this budget is not growth oriented. ಇದೇ ಒಂದೇ ಅಲ್ಲ there are so *many other things*. This is also one of the contributing factors. Whereas ಸಾಲ ಜಾಸ್ತಿ ಆಯಿತು. ಬಜೆಟ್ ಗಾತ್ರ ಜಾಸ್ತಿ ಮಾಡಿಕೊಂಡಿದ್ದಾರೆ. Plan 10% ಹೆಚ್ಚು

ಮಾಡಿಕೊಂಡಿದ್ದಾರೆ. ಬಜೆಟ್ ಗಾತ್ರ 20% ಆಗಿದೆ. ಒಂದು ಕಡೆ 20% ಬಜೆಟ್ estimates, plan growth is only 10% ಮಾನ್ಯ ಅಧ್ಯಕ್ಷರೆ, ನಾನು ನಿನ್ನೆ ತಾನೇ ನಿಮಗೆ ಬಜೆಟ್ ಪುಸ್ತಕದ ಒಂದು ಪುಟ ತೋರಿಸಿದ್ದೆ, ಈಗಲೂ ತೋರಿಸುತ್ತೇನೆ. ಇದು ಅಧಿಕಾರಿಗಳ mistake ಅಥವಾ printing mistake ಅಥವಾ ಏನೋ ಅಂತ ನನಗೆ ಗೊತ್ತಿಲ್ಲ. 2 ಕಡೆ ಇದೇ ರೀತಿ ಇದೆ. Revised estimates ಎಂದು ಇದೆ. ಪುಟ ಸಂಖ್ಯೆ 65, ಅಲ್ಲಿ ಆಯವ್ಯಯದಲ್ಲಿ ಅಂದಾಜು ಮಾಡಲಾದ ಒಟ್ಟು ಜಮೆಗಳು ರೂ. 83,729 ಕೋಟಿಗಳು, ಕಳೆದ ವರ್ಷಕ್ಕೆ ಇದು. ಪರಿಷ್ಕೃತ ಅಂದಾಜಿನ ಪ್ರಕಾರ ಆದು ರೂ. 78 ಸಾವಿರದ 440 ಕೋಟಿಗಳು. ಇದು correct ಅಥವಾ ಅಲ್ಲವೋ ಅಂತ ದಯಮಾಡಿ ಸ್ವಲ್ಪ ಹೇಳುತ್ತೀರಾ? ಏಕೆಂದರೆ ನನಗೆ ಗೊತ್ತಿರುವ ಮಟ್ಟಿಗೆ this not a correct figure. Either it is a printing mistake or wrongly mentioned or mistake by oversight. I don't know which mistake this is ನೀವು ಅಧಿಕಾರಿಗಳು ನೋಡಿಕೊಂಡಿಲ್ಲ. ನೀವೂ ನೋಡಿಕೊಂಡಿಲ್ಲ. ಬಜೆಟ್ ಪುಸ್ತಕ ಓದೂ ಇಲ್ಲ. ಇಲ್ಲಿ ಬಂದು ಓದುವುದಕ್ಕಿಂತ ಮುಂಚಿತವಾಗಿ ಅಲ್ಲಿ ಓದಿಲ್ಲ. ಮೊದಲೇ ಎಲ್ಲಾ ಕುಳತುಕೊಂಡು printing ಗೆ ಹೋಗುವ ಮುಂಚಿತವಾಗಿ ಮಾಡಬೇಕಾಗಿತ್ತು. ಇಲ್ಲಿ ಆ ರೀತಿ ಮಾಡಿರುವ ಹಾಗೆ ಕಾಣಿಸುವುದಿಲ್ಲ I don't know, ನೋಡಿ ಹೀಗೆ ಇರುವುದಕ್ಕೆ ಸಾಧ್ಯನೇ ಇಲ್ಲ. ಆಯವ್ಯಯ ಅಂದಾಜು ಮಾಡಲಾದ ಜಮೆಗಳು ಅಂದರೆ ಬಜೆಟ್ ಎಸ್ಟಿಮೇಟ್ಸ್ ರೂ. 83,729 ಕೋಟಿಗಳು, ಆದರೆ, ಪರಿಷ್ಕೃತ ಅಂದಾಜು ರೂ. 78,440 ಕೋಟಿ ಅಂದರೆ ರೂ. 5,289 ಕೋಟಿ ಕಡಿಮೆಯಾಗುತ್ತದೆ. This cannot be correct figure. ಅದನ್ನೆನೇ ಇಲ್ಲಿ ಹೊಸದಾಗಿ mention ಮಾಡಿ. ಹೊಸದಾಗಿ ಒಂದು ಲೈನ್ ಸೇರಿಸಿದ್ದಾರೆ. ಯಾವಾಗಲೂ ಬಜೆಟ್‌ನಲ್ಲಿ ಇಲ್ಲಿಯವರೆಗೂ ಯಾರೂ ಸೇರಿಸಿರಲಿಲ್ಲ. ವಾರ್ಷಿಕ ವಿತ್ತ ನಿರೂಪಣೆಯನುಸಾರ ಎಂದು ಮತ್ತೆ ಇಲ್ಲಿ ಒಂದು sentence ಕೊನೆಯಲ್ಲಿ ಸೇರಿಸಿದ್ದಾರೆ. ಜಮೆಗಳು ರೂ. 83,728 ಕೋಟಿಗಳು ಅಂದಾಜು, ಪರಿಷ್ಕೃತ ಅಂದಾಜು ರೂ. 78 ಸಾವಿರದ 439 ಕೋಟಿ ಮತ್ತೆ ಇದಕ್ಕೆ ಮುಂದಿನ ವರ್ಷಕ್ಕೆ ರೂ. 1 ಲಕ್ಷದ 3,368 ಕೋಟಿ ಅದರಲ್ಲಿ ವೆಚ್ಚ–ಖರ್ಚುಗಳು ರೂ. 85,318 ಕೋಟಿಗಳು, ರೂ. 84 ಸಾವಿರದ 434 ಕೋಟಿ ಖರ್ಚು, ಅಂದರೆ 78 ಸಾವಿರ ಕೋಟಿಯಿಂದ 84 ಸಾವಿರ ಕೋಟಿ ಈ ರೀತಿ jump ಆಗುವುದಕ್ಕೆ ಸಾಧ್ಯವೇ ? ಮುಖ್ಯಮಂತ್ರಿಗಳು

ಹೇಳಬೇಕು ಇದು ತಪ್ಪೋ ಅಥವಾ ರೈಟೋ ? ಇದು ಸರಿ ಎಂದು ಒಪ್ಪಿಕೊಳ್ಳುತ್ತೀರಾ ? Defend ಮಾಡಿಕೊಳ್ಳುತ್ತೀರಾ ?

ಶ್ರೀ ಡಿ.ವಿ ಸದಾನಂದಗೌಡ :– ನಿಮ್ಮ ಮಾತು ಮುಗಿದ ನಂತರ ಕೊನೆಗೆ ಹೇಳುತ್ತೇನೆ.

ಶ್ರೀ ಸಿದ್ಧರಾಮಯ್ಯ :– ನಾನು ತಿಳಿದುಕೊಂಡಿರುವುದಲ್ಲ . ಇದೇ ಸರಿ ಎಂದು ಒಪ್ಪಿಕೊಳ್ಳಲೋ ? ನೀವು ಹೇಳಿದರೆ ಇದೇ ಸರಿ ಅಂದರೆ ನಾನು ಇದೇ ಸರಿ ಎಂದುಕೊಳ್ಳುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ :– Argument ಬೇಡ.

ಶ್ರೀ ಸಿದ್ದರಾಮಯ್ಯ :– ಇಲ್ಲ argument ಮಾಡಲ್ಲ See i don't mind mistake, ನಿಮ್ಮ ತಪ್ಪು ಹುಡುಕುತ್ತಿಲ್ಲ. printing mistake ಆಗಿರಬಹುದು ನೋಡಿ.

ಶ್ರೀ ಡಿ.ವಿ. ಸದಾನಂದಗೌಡ :– ಇದು ಸರಿಯಾಗಿದೆ.

ಶ್ರೀ ಸಿದ್ಧರಾಮಯ್ಯ :– ಸರಿ ಆಗುವುದಕ್ಕೆ ಸಾಧ್ಯವೇ ಇಲ್ಲ. is this correct figure ? ಹೀಗಾದರೆ ಇದೆಲ್ಲಾ ಹೆಚ್ಚು ಕಡಿಮೆ ಆಗುತ್ತದೆ ನಿಮ್ಮ surplus ಈ ವರ್ಷಕ್ಕೆ revenue surplus ರೂ. 3343 ಕೋಟಿಗಳು it can't be ಮುಂದಿನ ವರ್ಷಕ್ಕೆ can't be ರೂ. 930 ಕೋಟಿ. So, I doubt this figure ಅವರು ಒಪ್ಪಿಕೊಳ್ಳಲಿಲ್ಲ ಅಂದರೆ ನಾನು ಏನು ಮಾಡುವುದಕ್ಕಾಗುವುದಿಲ್ಲ. ತಪ್ಪು ಆಗಿದ್ದರೆ ಯಾವಾಗಲೂ ತಪ್ಪು ಎಂದು ಒಪ್ಪಿಕೊಳ್ಳಬೇಕು. Defend ಮಾಡುವುದು ಸರಿಯಿಲ್ಲ. ಅವರು ನನಗೆ convince ಮಾಡಿದರೆ I will agree ನಾನೇನೂ ಬಜೆಟ್ prepare ಮಾಡಿಲ್ಲ. ನೀವೇ ಮಾಡಿರುವುದು. ನೀವೂ ಮಾಡಿರುವುದೋ ? ಯಾರು ಮಾಡಿರುವುದೋ ? ಇಲ್ಲಿ ಇದೆ ಈ ರೀತಿ. ಇದರಿಂದ ಏನಾಗುತ್ತದೆ ಅಂದರೆ ಮಾನ್ಯ ಮುಖ್ಯಮಂತ್ರಿಗಳು, ಹಣಕಾಸು ಮಂತ್ರಿಗಳೇ ನಿಮಗೆ ಬಜೆಟ್ estimates ಗಳು revised estimates ಗಳು ರೂ. 5289 ಕೋಟಿ ಕಡಿಮೆ ಆಗುತ್ತದೆ. ರೂ. 5289 ಕೋಟಿ ಕಡಿಮೆ ಅದರೆ revenue surplus ಆಗುವುದಿಲ್ಲ. Revenue deficit ಆಗುತ್ತದೆ. Its going to be revenue deficit. ಆಮೇಲೆ ಇನ್ನೂ ಒಂದು ಬಜೆಟ್‌ನಲ್ಲಿ ಅವರ ಗಮನಕ್ಕೆ ತರಬಯಸುತ್ತೇನೆ. ಅದೇನೆಂದರೆ ಇದನ್ನು ಕೂಡಾ ಅವರು ಉತ್ತರ ಕೊಡುವಾಗ ಸ್ವಲ್ಪ explain ಮಾಡಬೇಕು. ಕೇಂದ್ರದಲ್ಲಿ ತೆರಿಗೆಯಲ್ಲಿ ಪಾಲು ಎಂದು ಇದೆ. ಅದು ಈ ವರ್ಷ estimated

receipts ನಮ್ಮ ತೆರಿಗೆ ಪಾಲು ರೂ. 10,418 ಕೋಟಿ. revised estimate ನಲ್ಲಿ ರೂ. 11,075 ಕೋಟಿ ಆಗಿದೆ. ಮುಂದಿನ ವರ್ಷಕ್ಕೆ ಇವರು ಗುರಿ ಇಷ್ಟು ಬರುತ್ತದೆ ಎಂದು ಅಂದಾಜು ಮಾಡಿಕೊಂಡಿರುವುದು ರೂ. 13,093 ಕೋಟಿ, ಆಮೇಲೆ grants central schemes ಗೆ, centrally sponsored schemes ಗೆ ಕೇಂದ್ರ ಸರ್ಕಾರದಿಂದ ಬರುವಂಥ ಅನುದಾನಗಳು. ಅವರ ಗಮನಕ್ಕೆ ತರಬಯಸುತ್ತೇನೆ. ಮಾನ್ಯ ಅಧ್ಯಕ್ಷರೆ, ಅವರು ಉತ್ತರ ಕೊಡುವಾಗ ಇದನ್ನು ಕೂಡಾ explain ಮಾಡಬೇಕು. ಕೇಂದ್ರದಲ್ಲಿ ತೆರಿಗೆಯಲ್ಲಿ ಪಾಲು ಎಂದಿದೆ. ಅದು ಹೋದ ವರ್ಷ ಅಂದರೆ ಈ ವರ್ಷದ ನಮ್ಮ ತೆರಿಗೆ ಪಾಲು ರೂ. 10,418 ಕೋಟಿ. ಅದು revised ನಲ್ಲಿ ರೂ. 11,075 ಕೋಟಿ ಆಗಿದೆ. ಮುಂದಿನ ವರ್ಷಕ್ಕೆ ಅಂದಾಜು ಮಾಡಿಕೊಂಡಿರುವುದು ರೂ. 13,093 ಕೋಟಿ ಆಮೇಲೆ ಈ grants central scheme ಗೆ central sponsor schemes ಗೆ ಕೇಂದ್ರ ಸರ್ಕಾರದಿಂದ ಬರುವ ಅನುದಾನಗಳು. ಇವು 8,402 ಕೋಟಿ ರೂ.ಗಳು ಈ ವರ್ಷಕ್ಕೆ ಇತ್ತು. ಅದು revise ಮಾಡಿ ಕಡಿಮೆ ಆಗಿ 2358 ಕೋಟಿ ಇದೆ. 2358 ಕೋಟಿಯಿಂದ ಮುಂದಿನ ವರ್ಷಕ್ಕೆ 4,995 ಕೋಟಿ ಒಂದೇ ಸಾರಿ jump ಆಗುತ್ತದೆ. I doubt the correctness of this figure. ಏಕೆಂದರೆ ಒಂದೇ ಸಾರಿ 5 ಸಾವಿರ ಕೋಟಿ grants ಜಾಸ್ತಿ ಆಗುತ್ತದೆ ಎಂದರೆ ಅದು ಯಾವ grants ಜಾಸ್ತಿಯಾಗಿದೆ ಎಂಬುದನ್ನು ಹೇಳಬೇಕು. ನಾನು ಸುಮಾರು ವರ್ಷದಿಂದ ನೋಡಿದ್ದೇನೆ. ಆದರೆ ಒಂದೇ ಸಾರಿ ಈ ತರಹ jump ಆಗಿರುವುದನ್ನು ನೋಡಿಲ್ಲ. ಎಷ್ಟು percent jump ಆಗುತ್ತೆ ಆಗ ಎಂದರೆ ರೂ. 8358 ಕೋಟಿಗೆ 5 ಸಾವಿರ ಕೋಟಿ ಎಂದರೆ ಎಷ್ಟು percent ಆಗುತ್ತದೆ ಮಾನ್ಯ ಅಧ್ಯಕ್ಷರೆ ? 60% jump ಆಗುತ್ತದೆ. There will beavery big jump like this. it is not possible. ಕೇಂದ್ರ ಸರ್ಕಾರದವರು ಒಂದೇ ವರ್ಷದಲ್ಲಿ ಇಷ್ಟು grants ಜಾಸ್ತಿ ಮಾಡಲು ಸಾಧ್ಯವಿಲ್ಲ. ಏಕೆಂದರೆ ಅಲ್ಲಿಯೂ ಕೂಡ ಕೇಂದ್ರ ಸರ್ಕಾರದ ಬಜೆಟ್ ಇದೆಯಲ್ಲಾ ? ಅವರದು restrictions ಇದೆ ಯದ್ವಾತದ್ವಾ ಏನು ಬಂದಿಲ್ಲ. ನನ್ನ doubt may be true, may not be true. ಆದರೆ ನನ್ನ doubt express ಮಾಡುತ್ತಿದ್ದೇನೆ. ಇಲ್ಲಿ ಬಜೆಟ್ 930 ಕೋಟಿ ರೂ. revenue surplus ಎಂದು ತೋರಿಸಿದ್ದಾರೆ. ಮುಂದಿನ ವರ್ಷಕ್ಕೆ ಬಹುಶಃ revenue deficit ಆಗುವುದನ್ನು ತಪ್ಪಿಸಲು ತೋರಿಸಿದ್ದಾರೆ ಎಂದು ಅನಿಸುತ್ತದೆ. ಇಷ್ಟು ತೋರಿಸದೆ ಹೋದರೆ revenue surplus ಆಗುವುದಿಲ್ಲ

There is a Revenue deficit. Revenue deficit ಆಗಬಾರದು ಎನ್ನುವುದು Fiscal Responsibility Act ಹೇಳುವುದು. Revenue deficit ನಿಂದ revnue surplus ಇರಬೇಕು ಎಂಬುದು one of the targets in the Fiscal Responsibility Act, ಏಕೆಂದರೆ Revenue deficit ಬಹಳ ವರ್ಷದಿಂದ ಇತ್ತು ಕರ್ನಾಟಕದಲ್ಲಿ 2004–05 ರಲ್ಲಿ Revenue deficit wash out ಆಗಿ revenue surplus ಬಂದದ್ದು ಮೊದಲನೇ ಸಾರಿ 2004–05 ರಲ್ಲಿ 2007ರಲ್ಲಿ Fiscal Responsibility Act ಜಾರಿಗೆ ಬಂತು. ಅದು ಬಂದ ಮೇಲೆ 2005–06 ಕ್ಕೆ Revenue Surplus ಮಾಡಬೇಕೆಂದು condition ಇತ್ತು. ನಾನು ಹಣಕಾಸು ಮಂತ್ರಿ ಇರುವಾಗ 2004–05 ರಲ್ಲಿ ಒಂದು ವರ್ಷ ಮುಂಚೆ ಮಾಡಿದ್ದು. ಈಗ ಎಲ್ಲಿ ಇವರು ಮತ್ತೆ ಜಾರಿ ಬಿಟ್ಟಿದ್ದಾರೋ ಎಂಬುದು ನನ್ನ ಭಯ. ಮತ್ತೆ Revenue Deficit ಗೆ ಹೊರಟು ಹೋಗಿ ಬಿಟ್ಟರೋ, ಏನೋ ಎಂಬ ಭಯದಿಂದ ಮಾತನಾಡುತ್ತಿದ್ದೇನೆ. ಇದಕ್ಕೆ ಉತ್ತರ ಕೊಡುವಾಗ ಸರಿಯಾಗಿ ಕೊಡಿ ಯಾಕೆಂದರೆ ನನಗೂ ಸಮಾಧಾನವಾಗಬೇಕಲ್ಲ? ರೂ. 4995 ಕೋಟಿ jump ಆಗುತ್ತಿದೆ. ಅದು ಯಾವುದು ಎಂದು ಹೇಳಿ. ಕೇಂದ್ರ ಸರ್ಕಾರದ ಅನುದಾನದಲ್ಲಿ ಇನ್ಯಾವುದಾದರೂ ಹೆಚ್ಚುವರಿಯಾಗಿ ಬರುತ್ತಿದೆಯೇ ? ಹೊಸ programme ಏನಾದರೂ ಮಾಡಿದ್ದಾರಾ? ಆ programme ಗಾಗಿ ಕರ್ನಾಟಕಕ್ಕೆ ಹೆಚ್ಚು ಹಣ ಬರುತ್ತಿದೆಯಾ, ಏನು ಎನ್ನುವುದು ಗೊತ್ತಾಗಬೇಕು. ಈ ಲಕ್ಷ ಕೋಟಿ ಬಜೆಟ್ ಚರ್ಚೆ ಇದೆಯಲ್ಲಾ ಇದು ರಾಜ್ಯದ ಜನರನ್ನು ದಾರಿ ತಪ್ಪಿಸುವ, ಜನರಿಗೆ ಏನಪ್ಪ ಕರ್ನಾಟಕದಲ್ಲಿ ಬಿಜೆಪಿ ಸರ್ಕಾರ ಬಂದ ಮೇಲೆ ಇಷ್ಟು ದೊಡ್ಡ ಬಜೆಟ್ ಮಂಡಿಸಿ ಬಿಟ್ಟರು ಎಂದು ಭ್ರಮೆ ಹುಟ್ಟಸಲಿಕ್ಕೆ ಇದೆ. ನಾವು ಯಾವಾಗಲೂ ಭ್ರಮಾಲೋಕ ಸೃಷ್ಟಿ ಮಾಡಬಾರದು. ಭ್ರಮಾಲೋಕದಿಂದ ಯಾವಾಗಲೂ ಹೊರಗಿರಬೇಕು. ವಾಸ್ತವಿಕ ಲೋಕದಲ್ಲಿಯೇ ಇರಬೇಕು. ಏಕೆಂದರೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಾಲೀಕರು ನಮ್ಮ ಜನರು. ಅವರು ನಮಗೆ ಓಟು ಕೊಟ್ಟು ಕಳುಹಿಸಿರುವುದು. ಇಲ್ಲಿ ಇಲ್ಲಿ ಮಂಡಿಸುವುದು ಎಂದರೆ ಅವರಿಗೆ ಮಂಡಿಸುವುದು ಎಂದು. ಅವರಿಗೋಸ್ಕರ ಮಂಡಿಸುವುದು. ಅವರಿಗೆ ನಾವೇ responsible. ಆ ಕಾರಣಕ್ಕೋಸ್ಕರ ಈ ತರಹದ್ದು ಮಂಡಿಸಿರುವುದು. ಇದು ಜನರನ್ನು ಭ್ರಮಾಲೋಕದಲ್ಲಿ ತೆಗೆದುಕೊಂಡು ಹೋಗಲು ಮಾಡಿರುವ ಪ್ರಯತ್ನವೇ ಹೊರತು ವಾಸ್ತವಿಕ ನೆಲಗಟ್ಟಿನ ಮೇಲಿರುವ ಬಜೆಟ್ ಆಲ್ಲ ಎಂಬುದು ನನ್ನ ಸ್ಪಷ್ಟ ಅಭಿಪ್ರಾಯ. ಅದರ ಜೊತೆಗೆ ಮಾನ್ಯ ಅಧ್ಯಕ್ಷರೆ, 51 ಸಾವಿರ ಕೋಟಿ ನಮ್ಮ ರಾಜ್ಯದ ರೆವಿನ್ಯೂ

ಕೇಂದ್ರ ಸರ್ಕಾರದಿಂದ 26,447 ಕೋಟಿ grants ಮತ್ತು ನಮ್ಮ share. ಸಾಲ ಸುಮಾರು 21,902 ಕೋಟಿ ರೂ. ಇವರು ಮಂಡಿಸಿ ಸಾಲ ಮಾಡಿಕೊಂಡು ಹಬ್ಬ ಮಾಡಿ ಹೋಳಿಗೆ ತಿಂದ ಹಾಗೆ ಆಗುವುದಿಲ್ಲವೇನು ?

ಶ್ರೀ ಬಿ.ಸಿ. ಪಾಟೀಲ್ :– ಸಾಲ ಮಾಡಿಯಾದ್ರು ತುಪ್ಪ ತಿನ್ನು ಅಂತ ಮೆನು ಅವರದ್ದು.

ಶ್ರೀ ಸಿದ್ಧರಾಮಯ್ಯ :– ನಿಮ್ಮ ಕಡೆ, ತುಪ್ಪಾನ? ನಮ್ಮ ಕಡೆ ಹೀಗೆ ಮನುವರೆಗೆ ನಾನು ಓದಿಲ್ಲ. ಬಿ.ಸಿ. ಪಾಟೀಲ್‌ರವರೆ ಮನು, ಕೌಟಿಲ್ಯ ಬೇಡ, ಏಕೆಂದರೆ ಯಡಿಯೂರಪ್ಪ ನವರು ಬಜೆಟ್ ಮಂಡಿಸುವಾಗ ಕೌಟಿಲ್ಯ ಎಂದು mention ಮಾಡಿ ಬಿಟ್ಟಿದ್ದಾರೆ. ನಾನು ಹಣಕಾಸಿನ ಮಂತ್ರಿಯಾಗಿ, ಆ ಕೌಟಿಲ್ಯನ್ನ ಓದುವುದಕ್ಕೆ ಹೋಗಿಲ್ಲ. ಆ ಕಾಲಾನೆ ಬೇರೆ, ಈ ಕಾಲಾನೆ ಬೇರೆ, ಕೌಟಿಲ್ಯನ mention ಮಾಡಿದ್ರಿ ಯಡಿಯೂರಪ್ಪನವರೆ ಜ್ಞಾಪಕ ಇದೆಯಾ ? ಬಾಯಿ ಬಿಡಿ. ಇದ್ಯಾಕೆ ಹೀಗೆ ಮೂಗರ ಹಾಗೆ ಆಗಿಬಿಟ್ರಲ್ಲ ! ನಮ್ಮ ಜೊತೆಯಾದರೂ ಮಾತನಾಡಿ ಸ್ವಾಮಿ, ಬೇರೆಯವರ ಜೊತೆ ಬೇಡ. ನಮ್ಮ ಜೊತೆ ಏನಾದರೂ ವೈರತ್ವ ಇದೆಯಾ ? ವೈಯಕ್ತಿಕವಾಗಿ, we are good friends

ಶ್ರೀ ಎಸ್.ಎ. ರಾಮದಾಸ್ :– ಮನುವಿನ ವಿಚಾರ ಆಲ್ಲ ಅದು. ಮನುವಿನ ಅರ್ಥ ಶಾಸ್ತ್ರದಲ್ಲಿ ಅದನ್ನು ಹೇಳಿಲ್ಲ. ಉಮರ್ ಕಯಾಮ್ ಅರ್ಥ ವ್ಯವಸ್ಥೆಯ ವಿಚಾರವನ್ನು ಬರೆಯುವ ಸಂದರ್ಭದಲ್ಲಿ ಸಾಲವನ್ನಾದರೂ ಮಾಡಿ ತುಪ್ಪ ತಿನ್ನು ಎನ್ನುವ ಅಂಶವನ್ನು ಬರೆದಿರುವುದು. ಮನು ಅಲ್ಲ.

ಶ್ರೀ ಸಿದ್ಧರಾಮಯ್ಯ ;– ಆಯಿತು. Subject to correction.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ :– ಅಂಬಲಿ ಕುಡಿದು ತುಪ್ಪ ತೆಗೆದುಕೊಂಡು ತುಟಿಗೆ ಸವರಿಕೊಳ್ಳುವುದು ಬಿರ್ಯಾನಿ ತಿಂದೆ ಅಂತ ಹೇಳುವುದು !

ಶ್ರೀ ಸಿದ್ಧರಾಮಯ್ಯ :– ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡರೆ, ಕುಳಿತುಕೊಳ್ಳಿ ಹೇಳುತ್ತೇನೆ. ನಮ್ಮೂರಿನಲ್ಲಿ ಇದ್ದ ಒಬ್ಬ ಗೌಡ.

ಶ್ರೀ ಸಿ.ಟಿ. ರವಿ :– ಮೈಸೂರಿನ ಭಾಗದವರೆಲ್ಲಾ ಹೀಗೇನಾ?

ಶ್ರೀ ಸಿದ್ದರಾಮಯ್ಯ :– ನೀವು ಚಿಕ್ಕಮಗಳೂರಿನವರು ಮೈಗೆಲ್ಲಾ ಎಣ್ಣೆ ಸವರಿಕೊಂಡಿರುತ್ತೀರಲ್ಲ. ಗೊತ್ತೇ ಆಗುವುದಿಲ್ಲ ಅದು. ಇದು ಉಮರ್ ಖಯಾಮೋ, ಮನೂನೋ, ಕೌಟಿಲ್ಯನೋ ಯಾರೋ ಒಬ್ಬರು ಹೇಳಿದ್ದಾರೆ. ನಾವು ನೀವು ಹೇಳಿದ್ದನ್ನು ನಂಬಿಕೊಂಡ್ವಿ , ನಮಗೇನು ಗೊತಿಲ್ಲ. ವೈಯಕ್ತಿಕವಾಗಿ ಹಳ್ಳಿಯಲ್ಲಿ ಗಾದೆ ಮಾತು ಅಷ್ಟೆ. ಅವರೆಲ್ಲಾ ಮನೂನು

ಓದಿಕೊಂಡಿಲ್ಲ. ಉಮರ್ ಖಯಾಮ್‌ನೂ ಓದಿಕೊಂಡಿಲ್ಲ ಯಾರನ್ನು ಓದಿಕೊಂಡಿಲ್ಲ ಅವರು. ಹಳ್ಳಿಯಲ್ಲಿ ಅವರ ಅನುಭವದ ಮೇಲೆ ಬರತಕ್ಕಂತಹ ಮಾತುಗಳಿವು. ವೇದ ಸುಳ್ಳಾದರೂ ಗಾದೆ ಸುಳ್ಳಾಗದು. ನೋಡಿ ನಿಮ್ಮ counter part ಹೇಗೆ ಹೇಳುತ್ತಾರೆ. ಮಾನ್ಯ ಅಧ್ಯಕ್ಷರೆ, ಇದು ಹೇಗೆ ಆಗಿದೆ ಎಂದರೆ ಹಳ್ಳಿ ಭಾಷೆಯಲ್ಲಿ ಹಬ್ಬ ಮಾಡಿ ಒಬ್ಬಟ್ಟು ತಿನ್ನು ಅಂತ ನಮ್ಮ ಊರಿನಲ್ಲಿ ಹೇಳುವುದು. ಆದ್ದರಿಂದ ರಾಜ್ಯದ ಅಭಿವೃದ್ಧಿಗೆ ಆಗಲಿ ಇಷ್ಟೆಲ್ಲಾ ಆದರೂ ಕೂಡಾ, ಇಷ್ಟೆಲ್ಲಾ ದುಡ್ಡು ಮಂಡಿಸಿದ್ದಾರಲ್ಲ, ಬರಗಾಲಕ್ಕೆ ಎಲ್ಲೂ ಕೂಡಾ ಪ್ರಸ್ತಾಪ ಮಾಡಿಲ್ಲ. ಒಂದು ರೂಪಾಯಿ ಇಟ್ಟಿದ್ದೇನೆ ಬಜೆಟ್ ನಲ್ಲಿ ಎಂದು ಎಲ್ಲೂ ಹೇಳಿಲ್ಲ, No where in the entire budget. ರಾಜ್ಯದಲ್ಲಿ ಬರಗಾಲ ಇದೆ. April ನಲ್ಲಿ May ನಲ್ಲಿ ಮತ್ತು June ನಲ್ಲಿ in order to tackle the drought on a war footing so much of money is alloted in this budget ಎಂದು ಎಲ್ಲೂ ಕೂಡ ಹೇಳಿಲ್ಲ. Throughout the entire budget allocate ಮಾಡಿದ್ದೇನೆ ಎಂದು ಎಲ್ಲೂ ಕೂಡ ಹೇಳಿಲ್ಲ. So ಇಲ್ಲಿ ಎರಡು clarifications ಅನ್ನು ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಕೊಡಬೇಕು ಅಥವಾ ಆ ಬಗ್ಗೆ ಈಗಲೇ ಹೇಳಿದರೂ ಪರವಾಗಿಲ್ಲ. ಆ ಬಗ್ಗೆ ಉತ್ತರ ಕೊಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ನಾನು ಆಗಲೇ ಹೇಳಿದೆನಲ್ಲಾ revenue deficitಗೆ ಹೋಗುವ ಸಾಧ್ಯತೆ ಆಗಬಾರದು ಎನ್ನುವ ಕಾರಣಕ್ಕೋಸ್ಕರ, ಆ ಭಯದಿಂದ ಈ ಮಾತುಗಳನ್ನು ನಾನು ಪದೇ ಪದೇ ಹೇಳುತ್ತಿದ್ದೇನೆ ಎನ್ನುವ ಮಾತನ್ನು ಹೇಳಬಯಸುತ್ತೇನೆ.

ಅಧ್ಯಕ್ಷರು :- ಮಾನ್ಯ ಸಿದ್ಧರಾಮಯ್ಯನವರೆ, ತಮ್ಮ ಮಾತನ್ನು ಮಧ್ಯಾಹ್ನ 2.30 ಗಂಟೆಗೆ ಮುಂದುವರೆಸುತ್ತೀರಾ ?

ಶ್ರೀ ಸಿದ್ಧರಾಮಯ್ಯ :- ನನಗೇನಿಲ್ಲ, ತಾವು ಹೇಳಿದಂತಯೇ ಆಗಲಿ. ನಾವು ಮಾನ್ಯ ಅಧ್ಯಕ್ಷರು ಹೇಳಿದಂತೆ ಕೇಳುತ್ತೇವೆ.

ಅಧ್ಯಕ್ಷರು :- ಈಗ ಸದನವನ್ನು ಮಧ್ಯಾಹ್ನ 2.30 ಘಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವನ್ನು ಮಧ್ಯಾಹ್ನ 1.31 ಗಂಟೆಗೆ ಮುಂದೂಡಲಾಯಿತು. ಸದನವು ಪುನಃ ಮಧ್ಯಾಹ್ನ 2.30 ಗಂಟೆಗೆ ಸೇರಲು ತೀರ್ಮಾನಿಸಿತು)

(ಸದನದ ಕಲಾಪವು ಮಧ್ಯಾಹ್ನ 3.00 ಗಂಟೆಗೆ ಪ್ರಾರಂಭವಾಯಿತು. ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)